# ಬರಲಿದೆ ಠಾಕ್ರೆ ಸಿನಿಮಾ

ಶಿವಸೇನೆಯ ಸ್ಥಾಪಕ ಬಾಳಾ ಠಾಕ್ರೆ ಅವರ ಜೀವನವನ್ನು ಆಧರಿಸಿ ಹೊಸ ಹಿಂದಿ ಸಿನಿಮಾವೊಂದು ಸಿದ್ಧವಾಗುತ್ತಿದೆ. ಶಿವಸೇನೆ ಸಂಸದ ಸಂಜಯ್ ರಾವತ್ ಬರೆದಿರುವ ಚಿತ್ರಕಥೆಯಲ್ಲಿ ಠಾಕ್ರೆ ಪಾತ್ರಕ್ಕೆ ಜೀವ ತುಂಬಲು ಬಾಲಿವುಡ್ ಅತ್ಯುತ್ತಮ ಕಲಾವಿದರಲ್ಲಿ ಒಬ್ಬನಾಗಿರುವ ನವಾಜುದ್ದೀನ್ ಸಿದ್ದಿಖಿ ಕೂಡಾ ಸಿದ್ಧವಾಗಿದ್ದಾನೆ. ಅಂದ ಹಾಗೆ ಈ ಚಿತ್ರದಲ್ಲಿ ಅಮಿತಾಭ್ ಬಚ್ಚನ್ ಕೂಡಾ ನಟಿಸುವುದು ಖಾತ್ರಿಯಾಗಿದೆ. ಠಾಕ್ರೆ ಇದ್ದಾಗ ಅವರ ಅತ್ಯಂತ ಆತ್ಮೀಯರೂ ಆಗಿದ್ದ ಅಮಿತಾಭ್, 'ಈ ಚಿತ್ರದಲ್ಲಿ ತೊಡಗಿಸಿಕೊಳ್ಳಲು ನನಗೆ ತುಂಬ ಸಂತೋಷವಾಗುತ್ತದೆ' ಎಂದಿದ್ದಾರೆ. ಎಲ್ಲ ಅಂದುಕೊಂಡಂತೆ ನಡೆದರೆ ಚಿತ್ರ 2019ರ ಫೆಬ್ರುವರಿಯಲ್ಲಿ ತೆರೆ ಕಾಣಲಿದೆ. 'ಅಟೆನ್‌ಬರೋ ಅವರ ಗಾಂಧಿ ಚಿತ್ರದಂತೆ ಠಾಕ್ರೆ ಚಿತ್ರವನ್ನೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ಮಿಸಲಾಗುವುದು. ಆಸ್ಕರ್ ಪ್ರಶಸ್ತಿಗೆ ಎಂಟ್ರಿ ಪಡೆಯುವ ಕನಸೂ ನಮಗಿದೆ' ಎಂದಿದ್ದಾರೆ ರಾವತ್.





# ಬಿಪಾಸ ಮಗು?

ಸಹನಟ ಕರಣ್‌ಸಿಂಗ್ ಗ್ರೋವರ್ ಜತೆಗೆ ಬಿಪಾಸಾ ಬಸು ಮದುವೆಯಾಗಿ ಒಂದೂವರೆ ವರ್ಷವೇ ಕಳೆದಿದೆ. ಗಂಡ– ಹೆಂಡತಿ ತಮ್ಮ ಕೆಲಸದ ನಡುವೆಯೇ ಪುರುಸೊತ್ತು ಮಾಡಿಕೊಂಡು ದೇಶ ವಿದೇಶ ಸುತ್ತುವುದೂ ಇನ್‌ಸ್ಟಾಗ್ರಾಂ ನಲ್ಲಿ ಫೋಟೋಗಳನ್ನು ಹಾಕುವುದೂ ನಡೆದೇ ಇದೆ. ಇತ್ತೀಚೆಗೆ ಇಬ್ಬರೂ ಆಸ್ಪತ್ರೆಯೊಂದಕ್ಕೆ ಭೇಟಿ ನೀಡಿದ್ದರಂತೆ. ಅಷ್ಟಕ್ಕೇ 'ಬಿಪಾಸಾ ಗರ್ಭಿಣಿ' ಎಂಬ ಸುದ್ದಿ ಹಬ್ಬಿದೆ. 'ಇದೆಲ್ಲ ಸುಳ್ಳು. ಅಂತಹದ್ದೇನೂ ಇಲ್ಲ' ಎಂದು ಬಿಪಾಸಾ ಸೆಕ್ರೆಟರಿ ಸ್ಪಷ್ಟನೆ ನೀಡಿದ್ದಾರೆ. 'ಅಲೋನ್' ಎನ್ನುವ ಹಾರರ್ ಸಿನಿಮಾದ ಸೆಟ್‌ನಲ್ಲಿ ಇಬ್ಬರಿಗೂ ಪರಿಚಯವಾಗಿ ಪ್ರೇಮಕ್ಕೆ ತಿರುಗಿ ಮದುವೆಯಾದದ್ದು ಹಳೆಯ ಕಥೆ. ಆದರೆ ಗರ್ಭಿಣಿ ಎಂಬ ಸುದ್ದಿ ಹರಡಿದಾಕ್ಷಣ ಹಾರರ್ ಫಿಲಂ ನೋಡಿದಂತೆ ಬಿಪಾಸಾ ಗಾಬರಿ ಆಗುವುದೇಕೋ ಗೊತ್ತಾಗುತ್ತಿಲ್ಲ!

■ ಬಿಂದು



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65